ವಾರದ ಪತ್ರ

## ಸ್ಪರ್ಧಿಗಳಿಗೆ ನೆರವೂ ಆಗಲಿ

ಚಂದನ ವಾಹಿನಿಯ 'ಥಟ್ ಅಂತ ಹೇಳಿ' ವೀಕ್ಷಕರಿಗೆ ಒಂದು ರೀತಿಯಲ್ಲಿ ಜ್ಞಾನದೀವಿಗೆ. ಸೋಮೇಶ್ವರ ಅವರ ನಿರೂಪಣೆ ಸೊಗಸಾಗಿರುತ್ತದೆ. ಮೊದಲು ಭಾಗವಹಿಸುವ ಸ್ಪರ್ಧಿಗಳಿಗೆ ಅಲ್ಪ ಪ್ರಮಾಣದ ಸಂಭಾವನೆ ನೀಡುತ್ತಿದ್ದರು. ಈಗ ಕೊಡುತ್ತಿಲ್ಲ. ರಾಜ್ಯದ ಮೂಲೆ ಮೂಲೆಯಿಂದ ಆಗಮಿಸುವವರಿಗೆ ಸಾರಿಗೆ ವೆಚ್ಚಕ್ಕೆ ಆಗುವಷ್ಟಾದರೂ ಸಂಭಾವನೆ ನೀಡಿದರೆ ಚೆನ್ನಾಗಿರುತ್ತದೆ. ಜ್ಞಾನ ಸಂಜೀವಿನಿ ಕಾರ್ಯಕ್ರಮ ನಿರಂತರವಾಗಿ ಮುಂದುವರಿಯಲಿ.

—ಕುಬೇರಪ್ಪ ಎಂ. ವಿಭೂತಿ, ಹರಿಹರ

## ಕನ್ನಡ ಸೂಕ್ತಿ, ಬೇಡ ನಿರಾಸಕ್ತಿ

ಸ್ಟಾರ್ ಸುವರ್ಣ ವಾಹಿನಿಯ 'ಬೊಂಬಾಟ್ ಭೋಜನ' ಕಾರ್ಯಕ್ರಮದಲ್ಲಿ ಶುದ್ಧ ಶಾಖಾಹಾರ ಅಡುಗೆಗಳು ವೈವಿಧ್ಯಮಯವಾಗಿರುತ್ತವೆ. ಆದರೆ ಅಡುಗೆ ತಯಾರಾಗುವ ಸ್ಥಳದಲ್ಲಿ ಇಂಗ್ಲಿಷ್ ಒಕ್ಕಣೆ **'Meals and memories are ready here, you will eat it'** ಇದೆ. ಇದನ್ನೇ ಕನ್ನಡದಲ್ಲಿ 'ಸ್ವಾದಿಷ್ಟ ಅಡುಗೆಯ ಜೊತೆ ಸುಂದರ ನೆನಪುಗಳ ಭೋಜನ ಸವಿಯೋಣ' ಎಂದಿದ್ದರೆ ಸವಿಗನ್ನಡದ ಕಂಪನ್ನು ವೀಕ್ಷಕರು ಸವಿಯಬಹುದಲ್ಲವೇ?

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಚಂದನದ ರಸಪ್ರಶ್ನೆಯೇ ಚಂದ

ಸುದ್ದಿ ವಾಹಿನಿಗಳೂ ಸೇರಿದಂತೆ ಎಲ್ಲಾ ಕನ್ನಡ ವಾಹಿನಿಗಳು ಶಿವರಾತ್ರಿಯ ದಿನದಂದು ತಮ್ಮ ನಿರ್ಲಕ್ಷ್ಯ ತೋರಿದವು!

ಸಾಮಾನ್ಯವಾಗಿ ಕಥೆಗೆ ಪೂರಕ ಅಲ್ಲದಿದ್ದರೂ ಎಲ್ಲಾ ಹಬ್ಬಗಳನ್ನು ಭರ್ಜರಿ ಸೆಟ್ ಹಾಕಿ ಆಚರಿಸುತ್ತಿದ್ದರು. ಆದರೆ ಶಿವರಾತ್ರಿಯ ದಿನ ಅದೇ ಸೇಡು ದರ್ಪದ ಕಥೆಯನ್ನೇ ಬಿತ್ತರಿಸಿದವು. ಸಿನಿಮಾ ವಾಹಿನಿಗಳು ಅದೇ ಅದೇ ಸಿನಿಮಾಗಳನ್ನು ತೋರಿಸಿದವು.

ಜಾಗರಣೆ ನೆಪದಲ್ಲಿ 'ಮಜಾ ಟಾಕೀಸ್', 'ಸುವರ್ಣ ಗೃಹಮಂತ್ರಿ' ಮಾದರಿಯ ಕಾರ್ಯಕ್ರಮ ಪ್ರಸಾರವಾದವು. ಚಂದನದಲ್ಲಿ ಸಿನಿಮಾ ಕ್ವಿಜ್ ಕಾರ್ಯಕ್ರಮ ನಿಜಕ್ಕೂ ಚೆನ್ನಾಗಿತ್ತು.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ನಮಗಿಂಥ ಅವಕಾಶ ಇರಲಿಲ್ಲ!

ಝೀ ಕನ್ನಡ ವಾಹಿನಿಯ 'ಭರ್ಜರಿ ಬ್ಯಾಚುಲರ್ಸ್ ಸೀಸನ್ 2' ಭರ್ಜರಿಯಾಗಿಯೇ ಆರಂಭವಾಗಿದೆ. ಈ ಬಾರಿ ಹತ್ತು ಬ್ಯಾಚುಲರ್ಸ್ ಜೋಡಿಯಾಗಿ ಸ್ಪರ್ಧೆಗಿಳಿದಿದ್ದಾರೆ. ಈ ಕಾರ್ಯಕ್ರಮದಲ್ಲಿ ತರುಣ ತರುಣಿಯರ ಮನಸ್ಥಿತಿಯನ್ನು ಅರಿಯಲು ಹಲವಾರು ಅವಕಾಶಗಳು ಸಿಗುತ್ತವೆ. ಸುಕೃತಾ ಎನ್ನುವ ಏಂಜೆಲ್ ಸ್ಪರ್ಧಿ, ಫ್ರೆಂಡ್‌ಶಿಪ್, ಬಾಯ್–ಗರ್ಲ್ ಫ್ರೆಂಡ್‌ಶಿಪ್, ಲವಿಂಗ್, ಡೇಟಿಂಗ್, ಆರ್ಬಿಟಿಂಗ್, ಸಾಫ್ಟ್ ಲಾಂಚಿಂಗ್, ಬೆಂಚಿಂಗ್ ಇತ್ಯಾದಿ ಹುಡುಗ–ಹುಡುಗಿಯರ ವಲಯದಲ್ಲಿರುವ ಹಲವು ಸಂಬಂಧಗಳ ಬಗ್ಗೆ ತಿಳಿಸುತ್ತಾಳೆ. ಈ ಕ್ಷೇತ್ರದಲ್ಲಿ ಆಕೆಗಿರುವ ಜ್ಞಾನವನ್ನು ಗಮನಿಸಿ ಸ್ಪರ್ಧೆಯ ತೀರ್ಪುಗಾರರಲ್ಲಿ ಒಬ್ಬರಾದ ರವಿಚಂದ್ರನ್ ಅವರೂ ಈಗಿನ ತರುಣ ತರುಣಿಯರ ತಿಳಿವಳಿಕೆಯಷ್ಟು ತಮಗೆ ಜ್ಞಾನವಿಲ್ಲವೆಂದು ಹೇಳಿದ್ದಾರೆ.

ಆಧುನಿಕ ಯುಗದಲ್ಲಿ, ಎಲ್ಲ ಕ್ಷೇತ್ರಗಳಲ್ಲೂ ನಾವು ಅಪ್ ಡೇಟ್ ಆಗಿರಬೇಕೆಂದು ಈ ರಿಯಾಲಿಟಿ ಶೋ ತಿಳಿಸುತ್ತದೆ. ನಮ್ಮ ಕಾಲಕ್ಕೆ ಹೋಲಿಸಿದಾಗ ಇವತ್ತಿನ ಸಂಸ್ಕೃತಿ ಎತ್ತ ಸಾಗುತ್ತಿದೆ ಎಂಬ ಯೋಚನೆ ಮೂಡುವುದಾದರೂ, ನಮ್ಮ ತಾರುಣ್ಯದಲ್ಲಿ ಇಂತಹ ಅವಕಾಶಗಳಿರಲಿಲ್ಲವಲ್ಲ ಎಂಬ ಹತಾಶೆಯೂ ಮೂಡುತ್ತದೆ.

—ರಮಣ್ ಶೆಟ್ಟಿ ರೆಂಜಾಳ, ಮುಂಬಯಿ

## ಇದ್ಯಾವ ಮನರಂಜನೆ?

ಕಲರ್ಸ್ ಕನ್ನಡದ ಎರಡು ರಿಯಾಲಿಟಿ ಶೋಗಳ ಮಿಲನ ಕಾರ್ಯಕ್ರಮ ನೋಡಿದಾಗ ಅದರ ತಯಾರಕರಿಗೆ ಹಾಸ್ಯದ ಸಂಗತಿಗಳನ್ನು ಚಿತ್ರಿಸುವ ಕಲೆ ಗೊತ್ತಿಲ್ಲ ಎಂದೆನಿಸಿತು. ಕಾರ್ಯಕ್ರಮ ನಡೆಸಿದ ವಿಧಾನವೇ ಸರಿ ಇರಲಿಲ್ಲ. ಅನೇಕ ಪ್ರಸಂಗಗಳಲ್ಲಿ ಬೈಗುಳ, ಒದೆತ, ಕಿರುಚಾಟ ಮಾಮೂಲಿ ಇದ್ದವು. ಅಲ್ಲಿ ಕುಳಿತಿರುವ ಇತರರು ದೊಡ್ಡ ಬಾಯಲ್ಲಿ ನಗೆಯಾಟ. ಇದ್ಯಾವ ಮಟ್ಟದ ಮನರಂಜನೆ ಎಂಬ ಪ್ರಶ್ನೆಯನ್ನು ಮೂಡಿಸಿತು.

—ಕೆ.ಎಸ್. ಸೋಮೇಶ್ವರ

## ಸಿನಿಮಾ ಮೆರುಗು ತಂದ 'ಸರಿಗಮಪ'



ಝೀ ಕನ್ನಡದ 'ಸರಿಗಮಪ' ಕಾರ್ಯಕ್ರಮದಲ್ಲಿ ಈ ವಾರ ಸುಮಧುರ ಚಿತ್ರಗೀತೆಗಳಿಗೆ ಗಾಯಕರು ವಿಭಿನ್ನ ವೇಷ ಭೂಷಣಗಳಿಂದ ಕಂಗೊಳಿಸಿದರು. ಭಾವ–ಅಭಿನಯದಿಂದ ಹಾಡಿನ ಮೂಲಕ ವೀಕ್ಷಕರನ್ನು ಮೋಡಿ ಮಾಡಿದರು.

ಸಿನಿಮಾಗಳಲ್ಲಿ ಚಿತ್ರೀಕರಿಸಿದ ದೃಶ್ಯಗಳನ್ನು ವೇದಿಕೆ ಮೇಲೆ ತಂದಿದ್ದು ವಿಶೇಷವಾಗಿತ್ತು. 'ಜನುಮದ ಜೋಡಿ'ಯ ಹಾಡಿಗೆ ಶಿವಾನಿ, ದ್ಯಾಮೇಶ ನೃತ್ಯಕ್ಕೆ, 'ಗೀತಾ' ಸಿನಿಮಾ ಹಾಡಿಗೆ ಹಗ್ಗದ ಸೇತುವೆ, 'ಕಾಂತಾರ'ಕ್ಕೆ ಯಕ್ಷಗಾನದ ದೃಶ್ಯ – ಹೀಗೆ ಪ್ರತೀ ಹಾಡು ವಿಶೇಷವಾಗಿತ್ತು. ನಿರೂಪಕಿ ಮತ್ತು ತೀರ್ಪುಗಾರರೂ ಸಿನಿಮಾ ನಾಯಕರ ವೇಷಭೂಷಣದಲ್ಲಿ ಕಂಗೊಳಿಸಿದರು. ವೇದಿಕೆ ಬಣ್ಣ ಬಣ್ಣದ ದೀಪಗಳಿಂದ ಅಲಂಕೃತಗೊಂಡಿದ್ದು, ಅಲ್ಲಿದ್ದ ಪ್ರತಿ ಕಲಾವಿದರು ಗಾಯಕರಿಗೆ ಸಾಥ್ ಕೊಟ್ಟಿದ್ದರು. ಕೊರಿಯೊಗ್ರಫಿ, ಅದ್ಭುತ ಅನ್ನಿಸಿತು, ಝೀ ಕನ್ನಡ ಮರೆಯಲಾಗದ ಅನುಭವ ನೀಡಿತು.

—ಭಾರತೀ ಗಂಗಾಧರ್, ಬೆಂಗಳೂರು

ಝೀ ಕನ್ನಡದ 'ಸರಿಗಮಪ' ಈ ವಾರದ ಸಂಚಿಕೆಗಳಲ್ಲಿ ಹಾಡುಗಳ ಸನ್ನಿವೇಶಗಳ ಪುನರ್ ಸೃಷ್ಟಿಸಿದ ಕಲಾ ನಿರ್ದೇಶಕರು ಹಾಗೂ ಅವರ ತಂಡವನ್ನು ಅಭಿನಂದಿಸಲೇ ಬೇಕು.

ಭಾವಪೂರ್ಣ ಅಭಿನಯದೊಂದಿಗೆ ಹಾಡಿದ ಗಾಯಕ ಸ್ಪರ್ಧಿಗಳು, ವಾದ್ಯವೃಂದ, ಮಾರ್ಗದರ್ಶಿಗಳ ಕಾಣಿಕೆ ಅತ್ಯಮೂಲ್ಯ. ತೀರ್ಪುಗಾರರಲ್ಲಿ ರಾಜೇಶ್ ಕೃಷ್ಣನ್, ವಿಜಯ್ ಪ್ರಕಾಶ್ ಅವರ ಹಾಡುಗಾರಿಕೆ ಸ್ತುತ್ಯರ್ಹ. ಎ.ಆರ್. ರೆಹಮಾನ್ ಅವರು ವಿಜಯ್‌ಪ್ರಕಾಶರನ್ನು ಪ್ರಶಂಸಿಸಿದ್ದು ಈ ವಾರದ ಸಂಚಿಕೆಯ ಹೆಗ್ಗಳಿಕೆ. ನಮ್ಮ ಶನಿವಾರ ಹಾಗೂ ಭಾನುವಾರದ ಸಂಜೆಯನ್ನು ಸುಂದರಗೊಳಿಸಿದ ಝೀ ಕನ್ನಡಕ್ಕೆ ಅಭಿನಂದನೆಗಳು.

—ಓಂಕಾರ್ ಜಿ. ಕೊತ್ರೆ

## ಹೆಣ್ ಮಕ್ಳೇ ಸ್ಟ್ರಾಂಗು!

ಅಕ್ಕಪಕ್ಕದವರ ಜೊತೆ ಸಂಬಂಧ ಚೆನ್ನಾಗಿದ್ದರೆ ಒಳ್ಳೆಯದು, ನಮ್ಮ ಕಷ್ಟ ಸುಖಕ್ಕೆ ಆಗುತ್ತಾರೆ ಎಂದು ಹಿರಿಯರು ಹೇಳುತ್ತಾರೆ. ಅದು ಸೀರಿಯಲ್‌ನಲ್ಲಿಯೂ ಕಾಣಿಸಿಕೊಂಡಿತು. ಗಂಡನ ದಬ್ಬಾಳಿಕೆಗೆ ಸೆಟೆದು ನಿಂತಿರುವ ಕಲರ್ಸ್ ಕನ್ನಡದ 'ಭಾಗ್ಯಲಕ್ಷ್ಮೀ'ಯ ಭಾಗ್ಯಕ್ಕನಿಗೆ ಸ್ಟಾರ್ ಹೋಟೆಲ್‌ನಲ್ಲಿ ಕೆಲಸ. ಈ ವಾರ ಇನ್ನೂರೈವತ್ತು ಜನರಿಗೆ ಊಟದ ವ್ಯವಸ್ಥೆ ಮಾಡಲು ಒಪ್ಪಿದ್ದಾಳೆ. ಅವಳ ಸಹಾಯಕ್ಕೆ ಬೇರೆ ಧಾರಾವಾಹಿಯ ನಾರೀ ಮಣಿಯರು ಬಂದು ಸೌಟು ಹಿಡಿದು, ಕಾಯಿ ತುರಿದು ಪೋಸ್ ಕೊಟ್ಟರು. ವಿಶ್ವ ಮಹಿಳಾ ದಿನದ ಕಾರ್ಯಕ್ರಮ ಚೆನ್ನಾಗಿತ್ತು. 'ಹೆಣ್ ಮಕ್ಳೇ ಸ್ಟ್ರಾಂಗು ಗುರು' ಅಲ್ವಾ ಭಾಗ್ಯಕ್ಕ?

—ವೀಣಾ ಶಂಕರ್, ಬೆಂಗಳೂರು

